# ಮುಂಗಾರು ಶಿಕಾರಿ



ಪಶ್ಚಿಮ ಘಟ್ಟದ ನೆತ್ತಿಯ ಮೇಲೆ ಮುಂಗಾರು ಮೋಡ ದಟ್ಟೈಸಿದ ಸಂಜೆ ಜಾಡು ಸೇರುವ ತವಕದಲ್ಲಿ ದಿಣ್ಣೆ ಇಳಿಯುತ್ತಿರುವಾಗ ಕ್ಯಾಮರಾ ಸೆರೆ ಸಿಕ್ಕ ಕಾಡೆಮ್ಮೆಗಳ ಹಿಂಡು

**ಜೆ.ಎಸ್.ಅಮೋಘವರ್ಷ**



ದೀರ್ಘ ಬೇಸಿಗೆಯ ಧಗೆಯಿಂದ ಬಳಲಿದ್ದ ಮೈಮನಕ್ಕೆ ಮುಂಗಾರನ್ನು ಎದಿರುಗೊಳ್ಳುವುದು ಅಥವಾ ಆಹ್ವಾನಿಸುವುದೆಂದರೆ ಅದಕ್ಕಿಂತ ಆಹ್ಲಾದ ಬೇರೊಂದಿಲ್ಲ. ಋತುವಿನ ಮೊದಲ ಮಳೆ ಇಳೆ ತಬ್ಬುವ ಘಳಿಗೆ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡುತ್ತದೆ; ಆ ಮಾಹಿತಿಯ ಎಳೆ ಹಿಡಿದು ಮೋಡ ದಟ್ಟೈಸಿ ಗಾಳಿ ತಂಪಾಗಿ ಮೊತ್ತಮೊದಲ ಮುಂಗಾರು ಹನಿ ಸಿಡಿದು ಭುವಿಗೆ ಬಂದಾಗ ಅದಕ್ಕೆ ಮುಖವೊಡ್ಡುವುದಿದೆಯಲ್ಲಾ? ಅದು ಅಮೋಘ. ಆ ವಿಶೇಷ ಖುಷಿಗಾಗಿ ನಾವು ಪ್ರತಿ ವರ್ಷ ಕೇರಳ ಭಾಗದ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕುತ್ತೇವೆ. ಅದೇ ಮಾನ್ಸೂನ್ ಚೇಸಿಂಗ್!

'ಮುಂಗಾರು ಶಿಕಾರಿ' ನನ್ನ ಹಲವು ವರ್ಷಗಳ ಹಾಬಿ. ಈ ವಿಶಿಷ್ಠ ಶಿಕಾರಿಗೆ ಹೊರಡುವ ಪೂರ್ವ ಸಾಕಷ್ಟು ಬ್ಯಾಕ್‌ಗ್ರೌಂಡ್ ರೀಸರ್ಚ್ ಕೈಗೊಂಡಿದ್ದೆ. ಪಶ್ಚಿಮ ಘಟ್ಟದ ಗೆಳೆಯರಿಗೆ ಕರೆ ಮಾಡಿದೆ. ಅವರು ನೀಡಿದ ಮಾಹಿತಿ, ಹವಾಮಾನ ಇಲಾಖೆಯಿಂದ ದೊರೆತ ಡೇಟಾ ಜೊತೆಗೆ ಸ್ಯಾಟಲೈಟ್ ಚಿತ್ರಗಳನ್ನು ಪರಿಶೀಲಿಸಿದ ನಂತರ ಮಾನ್ಸೂನ್ ಮಾರುತಗಳ ಜಾಡಿನ ಕುರಿತು ಒಂದು ಮಟ್ಟದ ಖಚಿತ ಸುಳಿವು ಲಭಿಸಿತು.

ಶುಕ್ರವಾರ ಬೆಳಂಬೆಳಗ್ಗೆ ಪಯಣ ಆರಂಭ. ಬೆಂಗಳೂರಿನಿಂದ ಬರೋಬ್ಬರಿ ಹತ್ತು ತಾಸಿನ ಹಾದಿ. ಚಿನಾರ್ ಅಭಯಾರಣ್ಯ ಹಾಯ್ದು ಮುಂದೆ ಬಂದಿದ್ದೆವು. ಈ ಮೊದಲು ಸಣ್ಣಪುಟ್ಟ ಮಳೆ ಹನಿದಿದ್ದರಿಂದ ಇಡೀ ಕಾಡು ನಳನಳಿಸುತ್ತಿತ್ತು. ಪ್ರಾಯಶಃ ಕೇರಳದ ಮುನ್ನಾರ್ ತಲುಪಿದರೆ ಮುಂಗಾರು ನಮ್ಮನ್ನು ಎದಿರುಗೊಳ್ಳಬಹುದು ಎಂದು ಊಹಿಸಿದೆವು. ನಿರ್ದಿಷ್ಟ ತಾಣ ತಲುಪಿದ್ದಾಯಿತು. ಒಣ ಹವೆ. ಬಿಸಿ ಗಾಳಿ. ಕತ್ತೆತ್ತಿ ಆಕಾಶ ದಿಟ್ಟಿಸಿದರೆ ಒಂದಿನಿತೂ ಮೋಡದ ಸುಳಿವಿಲ್ಲ. ನಮ್ಮಿಬ್ಬರಿಗೂ ನಿರಾಶೆ ಕವಿಯಿತು. ಘಟ್ಟದ ಮೇಲೆ ಹತ್ತಿ ನಿಂತೆವು. ದಟ್ಟ ಹಸಿರಿನ ಕತ್ತಲೆ ಕಣಿವೆಗಳ ಫೋಟೋ ಕ್ಲಿಕ್ಕಿಸುವ ಮನಸಾಯಿತು. ಜೂಮ್ ಹಾಕಿ ಕಣಿವೆಯಿಂದ ಅಣ್ಣೈಮುಡಿ ಗಿರಿಯತ್ತ ದಿಟ್ಟಿಸುತ್ತಿರುವಾಗಲೇ ದಿಗ್ಗನೆ ಕಾಣಿಸಿದ್ದು ಹೆಬ್ಬಂಡೆಯಂತಹ ಕರಿ! ದಕ್ಷಿಣ ವಿಂಧ್ಯಾ ಶಿಖರ ಸಾಲಿನ ಅತ್ಯಂತ ಎತ್ತರದ ಗಿರಿ ಅಣ್ಣೈಮುಡಿ. ಅದರ ತಲೆ ನೇವರಿಸಿಕೊಂಡು ಹನಿ ತುಂಬಿದ ಕಾರ್ಮೋಡದ ಸಮೂಹವೊಂದು ನಾವಿದ್ದ ತಾಣದತ್ತ ಮೆಲ್ಲನೆ ಸಾಗಿ ಬಂತು. ನಮ್ಮಲ್ಲಿ ಅದೊಂದು ರೀತಿಯ ಧನ್ಯತೆಯ ಭಾವ. ಇಬ್ಬರಲ್ಲೂ ಮುಂಗಾರಿನ ಮೊದಲ ಹನಿಗೆ ಮೈಯೊಡ್ಡುವ ಪುಳಕ.

ಸಂಜೆ ಹೊತ್ತಿಗೆ ಮೋಡಗಳ ಅಬ್ಬರ ಹೆಚ್ಚಿತು. ರಾತ್ರಿ ವೇಳೆಗೆ ಘಟ್ಟ ಶ್ರೇಣಿಯನ್ನು ಪೂರ್ತಿ ಆವರಿಸಿಬಿಟ್ಟವು. ಮಧ್ಯರಾತ್ರಿ ತುಂತುರು ಹನಿಯಿತು. ಆದರೆ ಬೆಳಗ್ಗೆ ಎದ್ದು ನೋಡಿದರೆ ಮೇಘಗಳೆಲ್ಲ ಪರಾರಿ! ನಾವು ಸುಲಭಕ್ಕೆ ಸೊಲೊಪ್ಪಲು ರೆಡಿ ಇರಲಿಲ್ಲ. ರಾಜಮಲ್ಲೈ ಹತ್ತಿ ಆಹ್ವಾನಿಸಲು ನಿರ್ಧರಿಸಿದೆವು. ಇರ್ವಿಕುಲಂ ನ್ಯಾಷನಲ್ ಪಾರ್ಕ್ ಇರುವುದು ಇಲ್ಲಿಯೇ. ಇಲ್ಲಿ ನೀಲಗಿರಿ ಟಾರ್ (ಕಾಡು ಜಿಂಕೆ) ಹಿಂಡು ಹಿಂಡಾಗಿ ಕಾಣಿಸುತ್ತವೆ. ಅಷ್ಟೇ ಅಲ್ಲ ಇಲ್ಲಿಂದ ಪೂರ್ತಿ ಅಣ್ಣಾಮಲೈ ಶಿಖರ ಶ್ರೇಣಿ ಅಂಗೈ ಗೆರೆಗಳಷ್ಟೇ ನಿಚ್ಚಳವಾಗಿ ಕಾಣುತ್ತದೆ. ರಾಜಮಲೈ ಮೇಲೆ ನಿಂತಾಗ ನಮಗೆ ಭೂಲೋಕದ ಅರಿವೇ ತಪ್ಪಿತು. ಮೈಮರೆತು ಆಕಾಶ ದಿಟ್ಟಿಸುವಾಗ ರಾಶಿ ರಾಶಿ ಮೋಡಗಳ ಮೆರವಣಿಗೆ ಕಾಣಿಸಿತು. ನೋಡು ನೋಡುತ್ತಿದ್ದಂತೆ ನೆತ್ತಿ ಪೂರ್ತಿ ಮುಚ್ಚಿ ಹೋಯಿತು. ಮುಂದೆ ಕ್ಷಣಾರ್ಧದಲ್ಲಿ ಟಪ್ ಟಪ್ ಟಪ್... ಸದ್ದು ಮೊದಲಾಯಿತು. ಮಳೆಗೆ ಮೈ ನೀಡಿ ಓಹೋಽಽ ಎಂದು ಜೋರಾಗಿ ಕೂಗಿ ಕಣಿವೆಗಳತ್ತ ಹರ್ಷ ತೂರಿ ಬಿಟ್ಟೆವು. ಮಳೆ ಬಲವಾಯಿತು. ಆಕಾಶ-ಭೂಮಿ ಒಂದುಗೂಡಿದವು. ಮಳೆ ನರ್ತನದ ನಾದ ಕಾಡು ತುಂಬಿತು. ಮುಂಗಾರು ಶಿಕಾರಿಗೆ ಅಧಿಕೃತ ಚಾಲನೆ ದೊರೆಯಿತು. ಮಳೆ ಕರೆದುಕೊಂಡು ಮುನ್ನಾರ್‌ನತ್ತ ಹಿಂತಿರುಗಲು ನಿರ್ಧರಿಸಿದೆವು.

ನಮ್ಮ ವಾಹನ ಹಾವಿನಂತಹ ರಸ್ತೆಗಳನ್ನು ತಿರುವುಮುರುವಾಗಿ ಇಳಿಯುತ್ತಿದ್ದರೆ, ಇನ್ನೊಂದು ಬದಿಗೆ ಕೆಲವೇ ಮಾರುಗಳ ದೂರದಲ್ಲಿ ಮುಂಗಾರು ಮಳೆ ಬೆಟ್ಟ ಉಜ್ಜುತ್ತಾ ಬುಸುಗುಡುತ್ತಾ ಸಾಗಿ ಬಂತು. ಅಕ್ಷರಶಃ ನಮ್ಮದು ಚೇಸಿಂಗ್! ನಾವು ಸಾಗುತ್ತಿರುವ ಭಾಗದಲ್ಲಿ ಒಂದು ಹನಿಯೂ ಮಳೆ ಇಲ್ಲ. ಆದರೆ ಕೆಲವೇ ಮಾರುಗಳ ಅಂತರದಲ್ಲಿ ಭೋರ್ಗರೆಯುವ ವರ್ಷಧಾರೆ. ಆ ನೋಟ ವರ್ಣನಾತೀತ. ಒಣ ಹವೆಯಲ್ಲಿದ್ದ ಜನರ ಮೇಲೆ ರಪ್ಪನೆ ಅಪ್ಪಳಿಸುವ ಮಳೆ ಉಂಟು ಮಾಡುವ ಆಹ್ಲಾದ, ಆತಂಕ ಅಥವಾ ಚಡಪಡಿಕೆ ಹೇಗಿರುತ್ತೆ ಎಂದು ಕಣ್ಣಾರೆ ಕಂಡು ತಣಿಯುವ ಕುತೂಹಲ ನಮ್ಮದಾಗಿತ್ತು. ಆದ್ದರಿಂದ ಪಕ್ಕದಲ್ಲಿ ಓಡುತ್ತಿದ್ದ ಮಳೆಯ ವೇಗಕ್ಕೆ ತಕ್ಕಂತೆ ನಮ್ಮ ವಾಹನದ ಎಕ್ಸಲರೇಟರ್ ಒತ್ತಿದೆ. ಕಾಡಿನ ಜೀವ ಸಂಕುಲದ ನಡುವೆ ವಿಚಿತ್ರ ಗಡಿಬಿಡಿ. ಕೆಲವರು ಛತ್ರಿ ಹಿಡಿದು ಇನ್ನಾರದ್ದೋ ರಕ್ಷಣೆಗೆ ಧಾವಿಸುತ್ತಿದ್ದರೆ ಇನ್ನು ಹಲವರು ಅಕ್ಕಪಕ್ಕ ಸಿಕ್ಕ ಶೆಲ್ಟರ್‌ಗಳಲ್ಲಿ ತರಾತುರಿಯಲ್ಲಿ ತೂರಿಕೊಳ್ಳುತ್ತಿದ್ದರು. ನಾವು ಮುಂದೆ ಮುಂದೆ... ನಮ್ಮ ಹಿಂದೆ ಮಳೆ. ಚೇಸಿಂಗ್ ಉಲ್ಟಾ ಆಗಿತ್ತು. ಬೇಟೆಗಾರನನ್ನೇ ಬೇಟೆ ಬೆನ್ನಟ್ಟಿದ ಪರಿ....

ಈ ಘಟ್ಟ ಶ್ರೇಣಿಗಳಲ್ಲಿನ ಮಳೆ ಸಿಟಿಗಳಲ್ಲಿನ ರೀತಿ ತುಂತುರು ಹನಿಯುವುದಿಲ್ಲ, ಇಡೀ ಮೋಡಕ್ಕೆ ಮೋಡವೇ ಕಳಚಿ ಬೀಳುವ ಸ್ಥಿತಿ... ಸಾವಿರ ಜಲಪಾತಗಳು ಒಮ್ಮೆಲೆ ಧುಮ್ಮಿಕ್ಕಿದ ರೀತಿ. ಕ್ಷಣಾರ್ಧದಲ್ಲಿ ನಾವು ಸಾಗುವ ರಸ್ತೆಗಳು ಕಾಲುವೆಗಳಾಗಿ ಬಿಡುತ್ತವೆ. ಕಣ್ಣ ಮುಂದೆ ದಟ್ಟ ಬಿಳಿಯ ಹೊದಿಕೆ ಪಟಪಟಿಸುತ್ತದೆ. ಪೀಕಿದರೂ ನಾಲ್ಕು ಅಡಿ ದೃಷ್ಟಿ ಹಾಯುವುದಿಲ್ಲ. ಅಂತಹದ್ದೊಂದು ಮಹಾಮಳೆಯನ್ನು ಬೆನ್ನಿಗೆ ಕಟ್ಟಿಕೊಂಡು ನಾವು ಆ ಅನಂತ ಹಸಿರಿನ ಹೊಟ್ಟೆ ಸೀಳಿಕೊಂಡು ಬಾಣದಂತೆ ಇಳಿದು ಬರುತ್ತಿದ್ದೆವು. ಹಲವು ತಾಸುಗಳ ಬಳಿಕ ಈ ಚೇಸಿಂಗ್‌ನಲ್ಲಿ ಮಳೆ ಸೋತಿತು. ನಮ್ಮ ವೇಗವನ್ನು ಅದು ಸರಿಗಟ್ಟದೇ ಒಳನಾಡಿನ ಘಟ್ಟ ತಾಣಗಳಲ್ಲಿಯೇ ನಿಂತು ಗುಡುಗತೊಡಗಿತು. ಆ ವೇಳೆಗಾಗಲೇ ನಮ್ಮಲ್ಲಿಯೂ ಸಣ್ಣದೊಂದು ದಣಿವು ಇಣುಕಿತ್ತು. ಮಳೆ ಮಿಲನದಿಂದ ಮನ ತಣಿದಿತ್ತು. ವಾಹನ ಬೆಂಗಳೂರಿನ ರಸ್ತೆ ಕ್ರಮಿಸಲು ಶುರು ಮಾಡಿತು. ಅಷ್ಟು ಮಟ್ಟಿಗೆ ವರ್ಷದ ಮಾನ್ಸೂನ್ ಟ್ರೆಕಿಂಗ್ ನಮ್ಮಲ್ಲಿ ಸಂತೃಪ್ತಿ ಮೂಡಿಸಿತ್ತು. ಧನ್ಯತೆಯಿಂದ ಶಿಖರ ಶ್ರೇಣಿಗೆ ಕೈಮುಗಿದು ಮನೆ ದಾರಿಯತ್ತ ದೃಷ್ಟಿ ನೆಟ್ಟೆವು.

*(ನಿರೂಪಣೆ: ಸೋಮಶೇಖರ ಕಿಲಾರಿ*
*ಚಿತ್ರಗಳು: ಅಮೋಘವರ್ಷ)*

feedback@vijayanext.com



ಮುನ್ನಾರ್ ಕಣಿವೆಯಲ್ಲಿ ಮೋಡಗಳ ಅಬ್ಬರ

## ಸ್ವರ್ಗ ತಾಣಗಳು

ಮಾನ್ಸೂನ್ ಟ್ರೆಕಿಂಗ್‌ಗೆ ರಾಜ್ಯದಲ್ಲಿ ಅನೇಕ ತಾಣಗಳುಂಟು. ಬೇಸಿಗೆಯಲ್ಲೂ ಟ್ರೆಕಿಂಗ್ ಹೋಗಬಹುದು. ಆದರೆ ಮಳೆಗಾಲದಲ್ಲಿ ಇಲ್ಲಿ ಕಾಣ ಸಿಗುವ ಜೀವ ವೈವಿಧ್ಯ ಮತ್ತು ಪ್ರಕೃತಿಯ ಸೊಬಗು ಬೇರೆ ದಿನಗಳಲ್ಲಿ ಸಿಕ್ಕದು. ಅಂತಹ ಕೆಲವು ಆಯ್ದ ಟ್ರೆಕ್ ತಾಣಗಳು:

**ಕುದುರೆಮುಖ:** ಜೀವ ವೈವಿಧ್ಯದ ಶ್ರೀಮಂತ ತಾಣ.
**ದೂರ:** ಬೆಂಗಳೂರಿನಿಂದ 300 ಕಿ.ಮೀ.
**ಕುರಿಂಜಾಲ್:** ಕಾಡುಕೋಣಗಳ ಬೀಡು.
**ದೂರ:** ಬೆಂಗಳೂರಿನಿಂದ 300 ಕಿ.ಮೀ.
**ಕೊಡಚಾದ್ರಿ:** ಶಂಕರಾಚಾರ್ಯರು ಧ್ಯಾನ ಮಾಡಿದ ನೆಲೆ ಎಂಬ ನಂಬಿಕೆ. ಶಿವಮೊಗ್ಗ ಜಿಲ್ಲೆಯ ಎತ್ತರದ ತಾಣ.
**ದೂರ:** ಬೆಂಗಳೂರಿನಿಂದ 300 ಕಿ.ಮೀ.
**ನರಸಿಂಹ ಪರ್ವತ:** ಕಿಗ್ಗ ಜಲಪಾತದ ರಮ್ಯತೆ, ಮಳೆಯ ರೌದ್ರತೆ ಇಲ್ಲಿ ಕಾಣಸಿಗುತ್ತದೆ.
**ದೂರ:** ಬೆಂಗಳೂರಿನಿಂದ 350 ಕಿ.ಮೀ.
**ಆಗುಂಬೆ:** ಇದು ದಕ್ಷಿಣದ ಚಿರಾಪುಂಜಿ. ಜೀವ ವೈವಿಧ್ಯಗಳ ತಾಣ.
**ದೂರ:** ಬೆಂಗಳೂರಿನಿಂದ 300 ಕಿ.ಮೀ.
**ಇಡಕುಮೇರಿ (ಗ್ರೀನ್ ರೂಟ್):** ಸಕಲೇಶಪುರದಿಂದ ಸುಬ್ರಹ್ಮಣ್ಯವರೆಗಿನ ಇಲ್ಲಿನ ಸುರಂಗ-ಸೇತುವೆಗಳ ರೈಲು ಮಾರ್ಗ ಮನಮೋಹಕ.
**ಎವರೆಸ್ಟ್:** ಸ್ಥಳೀಯ ಜಟ್ಟಿಗಳನ್ನು ಗೆದ್ದು ಜಗಜಟ್ಟಿಗಳತ್ತ ಮುಖ ಮಾಡುವ ಚಾರಣಿಗರಿಗೆ ಕಾಣಿಸುವ ಏಕೈಕ ಆಕರ್ಷಣೆ ಎವರೆಸ್ಟ್. ಸಮುದ್ರ ಮಟ್ಟದಿಂದ 8,850 ಮೀಟರ್ ಮೇಲಿರುವ ಇದರ ಒಟ್ಟು ಎತ್ತರ 29,035 ಅಡಿ. ನೇಪಾಳ-ಟಿಬೆಟ್ ನಡುವಿನ ಹಿಮಾಲಯ ಪ್ರದೇಶದಲ್ಲಿನ ಇದು 8000 ಮೀಟರ್ ದಾಟಿದ ಜಗತ್ತಿನ 14 ಶಿಖರಗಳಲ್ಲಿ ಪ್ರಥಮ.

### ಹೊರಡುವ ಮುನ್ನ...

ಏಕಾಏಕಿ ಯಾವುದೇ ಸಾಹಸಕ್ಕೆ ಕೈ ಹಾಕುವುದು ಅಪಾಯಕಾರಿ. ಅದರಲ್ಲೂ ಮಾನ್ಸೂನ್ ಟ್ರೆಕಿಂಗ್ ಅಂದ್ರೆ ಹೆಚ್ಚಿನ ತಯಾರಿ ಹಾಗೂ ಎಚ್ಚರ ಅಗತ್ಯ. ಅಪರಿಚಿತ ಕಾನನ ಮತ್ತು ಅಲ್ಲಿನ ಜನರ ನಡುವೆ ಸಾಗಬೇಕಾದ್ದರಿಂದ ಸಿದ್ಧತೆ ತುಂಬ ಮುಖ್ಯ. ಇಂತಲ್ಲಿ ದುಷ್ಕರ್ಮಿಗಳ ಅಪಾಯವೂ ತಳ್ಳಿ ಹಾಕುವಂತಿಲ್ಲ. ಆದ್ದರಿಂದ ಸ್ಥಳೀಯ ಪೊಲೀಸರು ಮತ್ತು ಸಂಬಂಧಪಟ್ಟ ಅರಣ್ಯ ಇಲಾಖೆಯ ಅನುಮತಿ ಪತ್ರ ಜೊತೆ ಇರಬೇಕಾಗುತ್ತದೆ. ಇದರ ಜೊತೆಗೆ: ಟ್ರೆಕಿಂಗ್ ತಾಣದ ಮ್ಯಾಪ್, ಸ್ಥಳೀಯರಿಂದ ಹೆಚ್ಚಿನ ಮಾಹಿತಿ, ಟ್ರೆಕಿಂಗ್ ತಾಣ ಬಲ್ಲ ಗೈಡ್ ನೆರವು, ಸಮೀಪದ ವಸತಿ ವ್ಯವಸ್ಥೆ ಬಗ್ಗೆ ಪೂರ್ವಭಾವಿ ಮಾಹಿತಿ ಮತ್ತು ಅನುಮತಿ ಪಡೆಯುವುದು ಮುಖ್ಯ.

**ಜೊತೆ ಇರಬೇಕಾದ ಸಾಧನಗಳು:** ಟಾರ್ಚ್ (ಹೆಡ್ ಟಾರ್ಚ್ ಇದ್ದರೆ ಇನ್ನೂ ಅನುಕೂಲ), ಸರಿಯಾದ ಬೂಟುಗಳು, ಮಳೆ ತಡೆಯುವ ಉಡುಪುಗಳು, ಸ್ಲೀಪಿಂಗ್ ಬ್ಯಾಗ್, ಎಲ್ಲಾ ಸಾಮಗ್ರಿ ಇಟ್ಟುಕೊಳ್ಳಲುಬೇಕಾದ ದೊಡ್ಡ ಪ್ಲಾಸ್ಟಿಕ್ ಬ್ಯಾಗ್, ಕ್ಯಾಮರಾ ಮತ್ತಿತರೆ ಎಲೆಕ್ಟ್ರಾನಿಕ್ ಸಾಧನಗಳನ್ನು ಇರಿಸಲು ಡ್ರೈ ಬ್ಯಾಗ್, ಇಂಬಳ ಪ್ರತಿರೋಧಕ ಕಾಲ್ಗವಸು, ಸ್ಲೀಪಿಂಗ್ ಮ್ಯಾಟ್ಸ್, ಸಮರ್ಪಕ ಆಹಾರ (ಚಾಕೋಲೆಟ್ ಬಾರ್ಸ್ ಇತ್ಯಾದಿ) ಮತ್ತು ಬಹುಪಯೋಗಿ ಚಾಕು.

## ಮಾತಿಗೆ ದಕ್ಕದ ಸೌಂದರ್ಯ

ಮುಂಗಾರಿನಲ್ಲಿ ಮಲೆನಾಡಿನ ಸೊಬಗು ನೋಡುವ ನನ್ನ ಹಂಬಲ ಬಹು ದಿನಗಳದ್ದು. ಶುಕ್ರವಾರ ರಾತ್ರಿ ಬೆಂಗಳೂರಿನಿಂದ ಬಸ್ ಹತ್ತಿದ ನಮ್ಮ ತಂಡ ಶನಿವಾರದ ಬೆಳಗಿನ ತಿಂಡಿ ತಿಂದದ್ದು ಆಗುಂಬೆಯ ನೆತ್ತಿಯ ಮೇಲೆ. ಶಿಖರ ಮುಟ್ಟಿದಾಗ ಮಳೆ ಇರಲಿಲ್ಲ. ನಿರೀಕ್ಷೆ ಹುಸಿದ ನಿರಾಶೆ . ಆದರೆ ವೆದರ್ ರಿಪೋರ್ಟ್ ಪಕ್ಕಾ ಇದ್ದದ್ದರಿಂದ ಸಮಾಧಾನ ತಳೆದೆವು. ಸಂಜೆ ವೇಳೆಗೆ ಅದು ಫಲಿಸಿತು. ಕಾಡು ಹಠಾತ್ತನೆ ಬೇರೊಂದು ರೀತಿಯ ಜೀವ ಕಳೆಯಿಂದ ಝುಗಮುಗಿಸತೊಡಗಿತು.

ವಿಶೇಷ ರೇನ್‌ಕೋಟ್ ಧರಿಸಿ ಕ್ಯಾಮರಾ ಹಿಡಿದು ಕಾನನದ ಮಡಿಲಿಗೆ ನಡೆದೆವು. ವರ್ಷ ಧಾರೆಯ ನಡುವೆ ಚಿತ್ರವಿಚಿತ್ರ ಎಂಡೆಮಿಕ್ ಫ್ರಾಗ್ (ಪಶ್ಚಿಮ ಘಟ್ಟಕ್ಕೆ ಮೀಸಲಾದ ಕಪ್ಪೆಗಳು) ಹೊರ ಬಂದವು. ಅವುಗಳ ಹಿಂದೆ ನಾನೆಂದೂ ಕಂಡಿರದ ಹಾವುಗಳು ಕಾಣಿಸಿಕೊಂಡವು. ಒಮ್ಮೇಳಗೊಂಡ ಮಳೆ, ಕಪ್ಪೆ, ಕ್ರಿಮಿ-ಕೀಟಗಳ ಸದ್ದು ಯಾವುದೋ ಅನ್ಯ ಲೋಕಕ್ಕೆ ನಮ್ಮನ್ನು ನಡೆಸಿತು.



ಪಶ್ಚಿಮಘಟ್ಟದ ವಿಶಿಷ್ಠ ಕಪ್ಪೆ ರಾರ್ಚೆಸ್ಟಸ್ ಅಕ್ರೋಪರಲಜಿ

ಕುಂದಾದ್ರಿ ಬೆಟ್ಟದ ಮೇಲೆ ನಮ್ಮನ್ನು ತಬ್ಬಿ ಮುದಗೊಳಿಸಿದ ಆ ಮೋಡ, ಬಂಡೆಗಲ್ಲಿನ ಬದಿಯಿಂದ ಎದ್ದು ಹೆಡೆ ಬಿಚ್ಚಿದ ಆ ಕಾಳಿಂಗ ಸರ್ಪ, ಚಾಟು ಹರಸಿ ಚೆಲ್ಲಾಪಿಲ್ಲಿ ಓಡುವ ಆ ಜಿಂಕೆಗಳ ರಾಶಿ... ಇವೆಲ್ಲವನ್ನು ನೋಡುತ್ತ ಮೈಮರೆತವರ ಕಾಲಿಗೆ ಅಂಟಿ ರಕ್ತ ಹೀರುವ ಜಿಗಣೆಗಳು... ಒಂದೇ ಎರಡೇ? ಜಗತ್ತಿನ ನಿಜವಾದ ಸೌಂದರ್ಯ ಅಲ್ಲಿ ಮೈಚಾಚಿ ಮಲಗಿದೆ. ಅದರ ನಿಜರೂಪ ದರ್ಶನಕ್ಕೆ ಮಳೆಗಾಲವೇ ಬೇಕು. ಇದು ಹೇಳಿದರೆ ಅರ್ಥವಾಗುವುದಿಲ್ಲ... ನೋಡಿಯೇ ಆನಂದಿಸಬೇಕು.

**ರವಿ ಎ .ನಾರಾಯಣ** | ಟೆಕಿ

## ಮಾನ್ಸೂನ್ ವಿನ್ನರ್

**ಪ್ರಪಂಚದ ಅತಿ ಎತ್ತರದ ಜಲಪಾತ ಯಾವುದು?**

ತ್ರಿಶಲಾ ನಾಗರಾಜ್
ಆದಿ ಪಂಪ ರಸ್ತೆ
ಮೈಸೂರು

**ಉತ್ತರ: ವೆನಿಜುವೆಲದ ಏಂಜಲ್ ಜಲಪಾತ**